ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ. ದಿನಾಂಕಃ **10.07.2024**

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ ಬಿ ಆರ್ ವಕೀಲರಿಂದ

ಈ ಕೇಸಿನಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ **1** ಎಂದು , ಮೂರು ಆರ್ ಟಿ ಸಿ ಗಳನ್ನು ನಿಪಿ **2** ರಿಂದ ನಿಪಿ **4** ಎಂದು ಗುರುತಿಸಲಾಯಿತು .

ಪಾಟಿ ಸವಾಲುಃ ಶ್ರೀ ಸಿ ಎಸ್ ಪಿ ವಕೀಲರಿಂದ

ದಾವಾ ಸ್ವತ್ತುಗಳು ಕಾಳಪ್ಪನವರ ತಂದೆ ಖರೀದಿಸಿರುವುದಾಗಿ ತಿಳಿದು ಬಂದಿದ್ದು ಆ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತುಗಳು ಕಾಳಪ್ಪನವರ ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಕಾಳಪ್ಪನವರ ತಂದೆ ದಾವಾ ಸ್ವತ್ತುಗಳನ್ನು ಖರೀದಿಸಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ದಾವಾ ಸ್ವತ್ತುಗಳು ಕೊಡಗು ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ ಎಂ ಸಿ ಆರ್ ***131*85-86** ರ ಆದೇಶದಂತೆ **5700/-** ರೂ ಗಳಿಗೆ ಮಂಜೂರಾಗಿರುವ ಸ್ವತ್ತುಗಳು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಸ್ವತ್ತುಗಳಿಗೆ ಪಟ್ಟ ಸಂಖ್ಯೆ **36/87-88** ರಂತೆ ಸಾಗುವಳಿ ಚೀಟಿಯನ್ನು ನೀಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಕಾಳಪ್ಪನವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ನನಗೆ ಗೊತ್ತಿಲ್ಲ.

ಕಾಳಪ್ಪನವರಿಗೆ **5** ಜನ ಹೆಣ್ಣು ಮಕ್ಕಳು ಹಾಗೂ **3** ಜನ ಗಂಡು ಮಕ್ಕಳು ಇರುತ್ತಾರೆ . ಕಾಳಪ್ಪನವರ ಜೀವಿತಾವಧಿಯಲ್ಲಿ **5** ಜನ ಹೆಣ್ಣು ಮಕ್ಕಳಿಗೂ ಮದುವೆ ಮಾಡಿರುತ್ತಾರೆ ಎಂದರೆ ಸರಿ . ಮದುವೆಯ ಖರ್ಚಿಗಾಗಿ **1978** ರಲ್ಲಿ ಹೆಬ್ಬಾಲೆ ಗ್ರಾಮದ ಸರ್ವೆ ನಂ **3/7** ರ **6.20** ಏಕರೆ

ಜಮೀನನ್ನು ನಾಣಯ್ಯನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿ **18-06-1999** ರಲ್ಲಿ ಕಾಳಪ್ಪನವರು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರಿದು ನಾನು ಹುಟ್ಟುವ ಮೊದಲೇ ಮೃತ ಪಟ್ಟಿರುತ್ತಾರೆ ಎನ್ನುವರು . **11** ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ಕಾಳಪ್ಪನವರಿಗೆ ಮೂರು ಜನ ಗಂಡು ಮಕ್ಕಳಿದ್ದು ಅವರು ಬಸವರಾಜು , ಮೋಹನ ಮತ್ತು ಪಾಂಡುರಂಗ ಎಂದರೆ ಸರಿ . ಕಾಳಪ್ಪನವರ ಜೀವಿತಾವಧಿಯಲ್ಲಿ ಅವರ ಮೂರು ಜನ ಗಂಡು ಮಕ್ಕಳು ಕೂಡು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿ .

ದಿ **15-06-1998** ರಲ್ಲಿ ಕಾಳಪ್ಪನವರು ದಾವಾ ಸ್ವತ್ತುಗಳನ್ನು ಮೂರು ಜನ ಗಂಡು ಮಕ್ಕಳಿಗೆ ವಿಲ್ ಮಾಡಿರುತ್ತಾರೆ ಹಾಗೂ ಸದರಿ ವಿಲ್ ನಲ್ಲಿ ಅವರ ಪತ್ನಿ ಶ್ರೀಮತಿ ಹೆಚ್ ಕೆ ಗೌರಮ್ಮನವರಿಗೆ ಜೀವಿತಾವಧಿಯ ಹಕ್ಕನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಗೌರಮ್ಮನವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಕಾಳಪ್ಪನವರ ಮರಣದ ನಂತರ ದಾವಾ ಸ್ವತ್ತುಗಳು ಗೌರಮ್ಮ ಹಾಗೂ ಪ್ರತಿವಾದಿ **9** ರಿಂದ **11** ರವರ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ . ಕಾಳಪ್ಪನವರು ಮಾಡಿದ ಮರಣ ಶಾಸನದ ಅನ್ವಯ ಪ್ರತಿವಾದಿ **9** ರಿಂದ **11** ರವರು ದಾವಾ ಸ್ವತ್ತುಗಳ ಸಂಪೂರ್ಣ ಮಾಲೀಕರಾಗಿರುತ್ತಾರೆ ಎಂದರೆ ಸರಿ . ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲದ ಕಾರಣ ದಾವಾ ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ದಾವಾ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.